ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್

ಸಿ.ಸಿ.ನಂ. 3869/2022

ಸಿ.ಡಬ್ಲ್ಯೂ -02
ಪಿ.ಡಬ್ಲ್ಯೂ -01

**ಸಾಕ್ಷಿಗೆ ದಿಃ 03.06.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ ಹೆಚ್.ಎಂ.ಆರ್ ವಕೀಲರಿಂದಃ**

ನಾನು ಪ್ರಕರಣವನ್ನು ರಾಜಿ ಮಾಡಿಕೊಂಡಿರುತ್ತೇನೆ. ದಿ. 09.04.2020 ರಂದು ನಾನು ಮತ್ತು ಚಾಸಾ 3 ಮತ್ತು 4 ಅವರು ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ಗಲ್ಲಿ ವಿಚಾರವಾಗಿ ಗಲಾಟೆ ಆಗಿದ್ದು ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಹೇಳಿರುವುದು ಸುಳ್ಳು ಎಂದರೆ ಸರಿ. ಆರೋಪಿ 3 ನನ್ನ ಗಂಡನಿಗೆ ಕಲ್ಲಿನಿಂದ ಹೊಡೆದಿಲ್ಲವೆಂದರೆ ಸರಿ. ಆರೋಪಿ 1 ನನಗೆ ದೊಣ್ಣೆಯಿಂದ ಹೊಡೆದಿಲ್ಲವೆಂದರೆ ಸರಿ. ಚಾಸಾ 5 ಮತ್ತು 6 ಅವರು ಜಗಳ ಬಿಡಿಸಿಲ್ಲವೆಂದರೆ ಸರಿ. ಯಾವುದೇ ನ್ಯಾಯ ಪಂಚಾಯಿತಿ ಆಗಿಲ್ಲವೆಂದರೆ ಸರಿ. ನಾನು ಯಾವುದೇ ಹೇಳಿಕೆ ನೀಡಿಲ್ಲವೆಂದರೆ ಸರಿ. ಆರೋಪಿ ಮತ್ತು ಮು. ಮಾ. ಗಳನ್ನು ನಾನು ಗುರುತಿಸಿಲ್ಲವೆಂದರೆ ಸರಿ.

ದಿಃ 09.04.2020 ರಂದು ಆರೋಪಿತರು ನನ್ನನ್ನು ಎಳೆದಾಡಿ ಹೊಡೆದಿಲ್ಲವೆಂದರೆ ಸರಿ. ಆರೋಪಿತರು ನಮಗೆ ಯಾವುದೇ ಜೀವ ಬೆದರಿಕೆ ಹಾಕಿಲ್ಲವೆಂದರೆ ಸರಿ. ಚಾಸಾ 1 ಅವರು ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ ಸ.ಸ. ಅ. ಅವರಿಂದಃ**

ದಿನಾಂಕ 12.06.2024 ರಂದು ನಾನು ನ್ಯಾಯಾಲಯದ ಮುಂದೆ ನುಡಿದಿರುವ ಸಾಕ್ಷಿ ಸರಿ ಯಿರುವುದಿಲ್ಲ. ನಾನು ಆ ದಿನ ನುಡಿದಿರುವ ಸಾಕ್ಷಿ ಸರಿಯಿದ್ದರೂ ಸಹ ನಾನು ಆರೋಪಿತರೊಂದಿಗೆ ಪ್ರಕರಣವನ್ನು ರಾಜಿ ಮಾಡಿಕೊಂಡಿರುವ ಕಾರಣ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಕುಣಿಗಲ್.